ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ 57)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

### ಪಿ.ಸಿ.ನಂ.304/2024

**ಸಾಕ್ಷಿದಾರರ ಹೆಸರು** **ಜಮೀರ್ ಪಾಷಾ**

**ತಂದೆಃಹೆಸರು** **ಖಾಜಾ ಮೋಹಿನುದ್ದೀನ್** **ಸಿಡಬ್ಲೂಃ 1**

**ವಯಸ್ಸು** **37 ವರ್ಷ**

**ಉದ್ಯೋಗಃ** **ವೆಲ್ಡಿಂಗ್**

**ವಾಸ ಸ್ಥಳಃ** **ಗಂಗಾವತಿ ರಸ್ತೆ, ಸಿಂಧನೂರು.**

**ದಿನಾಂಕ 03-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ. ಎಂ. ಎನ್. ದೂರುದಾರರ ಪರ ವಕೀಲರಿಂದ**

**ಈ ಹಂತದಲ್ಲಿ ಸಾಕ್ಷಿಯು ಕನ್ನಡ ಭಾಷೆ ಅಷ್ಟೋಂದು ಬರುವದಿಲ್ಲ, ಹಿಂದಿ ಭಾಷೆ ಬರುತ್ತದೆ ಎಂದು ತಿಳಿಸಿದ್ದರಿಂದ ಶ್ರೀ. ಹುಸೇನ್ ವಕೀಲರನ್ನು ಭಾಷಾಂತಕಾರರನ್ನಾಗಿ ರೂ.200/- ವೆಚ್ಚದ ಮೇರೆಗೆ ನೇಮಿಸಿ, ಅವರಿಗೂ ಸಹ ಪ್ರಮಾಣ ವಚನ ಬೋಧಿಸಲಾಯಿತು.**

ಸಾಲ ಮಾಡಿಸುತ್ತೇನೆಂದು ಹೇಳಿ, ನನ್ನನ್ನು ನಂಬಿಸಿ ಮೋಸ ಮಾಡಿರುತ್ತಾರೆ. ನನ್ನಿಂದ ರೂ.2 ಲಕ್ಷ ಹಣ ಪಡೆದುಕೊಂಡಿರುತ್ತಾರೆ. ಆತ ನನಗೆ 2 ವರ್ಷಗಳ ಹಿಂದಿನಿಂದ ಪರಿಚಯ ಇರುತ್ತಾರೆ. ಆತ ನನಗೆ ಸರ್ಕಾರದಿಂದ ಸಾಲ ಕೊಡಿಸುತ್ತೇನೆಂದು ಹೇಳಿ ಭರವಸೆ ಹುಟ್ಟಿಸಿದ್ದ. ಆತ ನನ್ನ ಹೆಂಡತಿಯ ತಮ್ಮನಿಂದಲೂ ಸಹ ಹಣ ಪಡೆದಿರುತ್ತಾನೆ. ನನ್ನ ಅಳಿಯನಿಗೆ ನೌಕರಿ ಕೊಡಿಸುತ್ತೇನೆಂದು ಹೇಳಿ ನನ್ನಿಂದ ರೂ.15 ಲಕ್ಷ ಹಣ ಪಡೆದಿರುತ್ತಾನೆ. ಕೆಲಸ ಆಗದೇ ಇರುವುದರಿಂದ ನಾವು ಹೋಗಿ ಕೇಳಿದಾಗ, ಹಣ ಕೊಡಲು 15 ದಿನಗಳ ಸಮಯ ತೆಗೆದುಕೊಂಡಿರುತ್ತಾನೆ. ನಂತರ ನನ್ನ ಅಂಗಡಿಗೆ ಬಂದು, ನನಗೆ ಹೊಡೆದು ಬಡೆದು, ಅವಾಚ್ಯ ಶಬ್ದಗಳಿಂದ ನಿಂದಿಸಿ ಹೋಗಿರುತ್ತಾನೆ.

ಸ್ವಲ್ಪ ದಿನಗಳ ನಂತರ ನನ್ನ ಅಂಗಡಿಯ ಬಳಿ ಬಂದು ನಿಮ್ಮ ಕೆಲಸ ಆಗುತ್ತದೆ, 8 ದಿನಗಳ ಸಮಯ ಕೊಡು ಎಂದು ಹೇಳಿ ಹೋಗಿದ್ದನು. ಅದಲ್ಲದೇ ಕೆಲಸ ಆಗುತ್ತದೆ ಎಂದು ಹೇಳಿ ನನ್ನಿಂದ

This is a True Copy of the Court Records Online. Authenticated @ districts.ecourtsindia.com/cnr/KARC510050962024/truecopy/order-1.pdf

ಫೋನ್ ಪೇ ಮೂಲಕ ರೂ.4,31,307/- ನ್ನು ಪಡೆದುಕೊಂಡಿರುತ್ತಾನೆ. ನಂತರ ನಾನು ಆತನಿಗೆ ಫೋನ್ ಕರೆ ಮಾಡಿ ನನ್ನ ಅಳಿಯನ ನೌಕರಿಯ ವಿಷಯದ ಬಗ್ಗೆ ಕೇಳಿದಾಗ ಆತ ನನಗೆ ಕೆಲಸ ಆಗುತ್ತದೆ ಎಂದು ಹೇಳಿ ಆಶ್ವಾಸನೆ ಕೊಡುತ್ತಾ ಬಂದಿರುತ್ತಾನೆ. ನಿಮ್ಮ ಕೆಲಸ ಆಗಿದೆ ಎಂದು ಹೇಳಿ ನನ್ನಿಂದ ರೂ.12 ಲಕ್ಷ ಚೆಕ್ಕಿನ ಫೋಟೋವನ್ನು ವಾಟ್ಸಪ್ ಮುಖಾಂತರ ಪಡೆದಿರುತ್ತಾನೆ. ಮತ್ತೆ ನನ್ನಿಂದ ರೂ.7,69,000/- ಲಕ್ಷ ಚೆಕ್ಕಿನ ಫೋಟೋವನ್ನು ವಾಟ್ಸಪ್ ಮುಖಾಂತರ ಪಡೆದಿರುತ್ತಾನೆ.

ನಂತರ ನಾನು ಠಾಣೆಗೆ ದೂರು ಕೊಡಲು ಹೋಗಿದ್ದೆ. ಠಾಣೆಯಲ್ಲಿ ದೂರು ಪಡೆಯಲಿಲ್ಲ, ಆದ್ದರಿಂದ ನ್ಯಾಯಾಲಯಕ್ಕೆ ಹಾಕಿರುತ್ತೇನೆ. ಆದ್ದರಿಂದ ಆತನಿಗೆ ಶಿಕ್ಷೆ ಕೊಡಬೇಕೆಂದು ಕೋರುತ್ತೇನೆ.

ಸಾಕ್ಷಿಯು ದೂರಿನ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಸಿ-1 ಎಂದು, ಸಾಕ್ಷಿಯು 2 ಅಂಚೆ ರಶೀದಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಸಿ-2 & 3 ಎಂದು, ಸಾಕ್ಷಿಯು 2 ಪೆನ್ ಡ್ರೈವನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಸಿ-4 & 5 ಎಂದು, ಸಾಕ್ಷಿಯು ಕಲಂ.65 ಬಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಸಿ-6 ಎಂದು, ಸಾಕ್ಷಿಯು ಬಿಲ್ಲನ್ನು ನೋಡಿ ಗುರುತಿಸಿದ್ದು, ಅದನ್ನು ನಿಸಿ-7 ಎಂದು, ಸಾಕ್ಷಿಯು 3 ಬ್ಯಾಂಕ್ ಸ್ಟೇಟ್‌ಮೆಂಟ್‌ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಸಿ-8 ರಿಂದ 10 ಎಂದು ಗುರುತಿಸಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**

ಭಾಷಾಂತರಕಾರರ ಸಹಿ.

This is a True Copy of the Court Records Online. Authenticated @ districts.ecourtsindia.com/cnr/KARC510050962024/truecopy/order-1.pdf